# ವಿಧಾತೃ ದೇವತೆಗಳೆಲ್ಲಾ ವಿಷ್ಣುವಿನ ಹಿಂದೆ

1. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchhu Rayaru.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
4. **Note:** The wordings given without highlights are as per Ref. 1. The wordings mentioned in yellow highlights are as per Ref. 2. The wordings given in green highlights are as per Ref. 3.
5. **Note:** Singer has followed lyrics mainly as in Ref. 2.
6. **Note:** The wordings given Ref. 3 is similar to Ref. 1 but with few differences. Hence, they are given separately.
7. **Note:** Ankitas are matching in Ref. 1 & 3 but different in Ref. 2. We have considered Ref. 1 as standard and taken that Ankita for listing.

| | |
|---|---|
| ರಾಗ: ಶಂಕರಾಭರಣ ತಾಳ: ಝಂಪೆ | ರಾಗ: ಕಾಂಬೋಧಿ ತಾಳ: ಝಂಪೆ |
| | |
| ವಿಧಾತೃ ದೇವತೆಗಳೂ ವಿಷ್ಣುವಿನ ಹಿಂದೆ | ವಿದಿತ ದೈವಗಳೆಲ್ಲ ವಿಷ್ಣುವಿನ ಹಿಂದೆ |
| ತಪ್ಪಿದರೆ ಫಣಿಫಣವ ಪಿಡಿವೆ ‖ ಪ ‖ | ಇದಕೆ ನಾ ಫಣಿಫಣವ ಕಯ್ಯಾಗೆ ಪಿಡಿವೆ |
| | |
| ಸಕಲ ತೀರ್ಥಗಳೆಲ್ಲ ಸಾಲಗ್ರಾಮದ ಹಿಂದೆ | ಸಕಲ ತೀರ್ಥಗಳೆಲ್ಲ ಸಾಲಿಗ್ರಾಮದ ಹಿಂದೆ |
| ಪ್ರಕಟ ಗ್ರಂಥಗಳೆಲ್ಲ ಭಾರತದ ಹಿಂದೆ | ಸಕಲ ವೃಕ್ಷಗಳೆಲ್ಲ ಶ್ರೀತುಲಸಿ ಹಿಂದೆ |
| ಸಕಲ ವೃಕ್ಷಗಳೆಲ್ಲ ಶ್ರೀತುಲಸಿ ಹಿಂದೆ | ಸಕಲ ದ್ರವ್ಯಗಳೆಲ್ಲ ವಿದ್ಯಾ ದ್ರವ್ಯದ ಹಿಂದೆ |
| ಸಕಲ ಪರ್ವತಗಳು ಮೇರುವಿನ ಹಿಂದೆ ‖ 1 ‖ | ಪ್ರಕಟ ಗ್ರಂಥಗಳೆಲ್ಲ ಭಾರತದ ಹಿಂದೆ |
| | |
| ಮತಗಳೆಲ್ಲವು ಮಧ್ವಮತದ ಸಾರದ ಹಿಂದೆ | ಮತಗಳೆಲ್ಲವು ಮಧ್ವ ಮತ ಸುಸಾರದ ಹಿಂದೆ |
| ಇತರ ವರ್ಣಗಳೆಲ್ಲ ವಿಪ್ರರ ಹಿಂದೆ | ಇತರ ವರ್ಣಗಳೆಲ್ಲ ವಿಪ್ರರಾ ಹಿಂದೆ |
| ವ್ರತಗಳೆಲ್ಲವು ಹರಿದಿನದ ವ್ರತದ ಹಿಂದೆ | ವ್ರತಗಳೆಲ್ಲವು ಹರಿದಿನ ವ್ರತದ ಹಿಂದೆ |
| ಅತಿಶಯದ ದಾನಗಳು ಅನ್ನದಾನದ ಹಿಂದೆ ‖ 2 ‖ | ಅತಿಶಯದ ದಾನಗಳು ಅನ್ನದಾನದ ಹಿಂದೆ |
| | |
| ಉತ್ತಮ ಗುಣಗಳೆಲ್ಲ ಉದಾರತ್ವದ ಹಿಂದೆ | ಉತ್ತುಮ ಗುಣಗಳೆಲ್ಲ ಔದಾರ್ಯ ಗುಣದ ಹಿಂದೆ |
| ಮತ್ತೆ ಕರ್ಮಗಳು ಮಜ್ಜನದ ಹಿಂದೆ | ಮತ್ತೆ ಕರ್ಮಗಳೆಲ್ಲ ಮಜ್ಜನದ ಹಿಂದೆ |
| ಪೃಥ್ವಿಯೊಳಗೆ ನಮ್ಮ ಪುರಂದರ ವಿಠಲನ | ನಿತ್ಯ ನೇಮಗಳು ಗಾಯತ್ರಿ ಜಪದಾ ಹಿಂದೆ |
| ಭಕ್ತ ವತ್ಸಲನೆಂಬ ನಾಮವೇ ಮುಂದೆ ‖ 3 ‖ | ಚಿತ್ತಜನಯ್ಯ ಶ್ರೀ ಪುರಂದರ ವಿಠಲ |

**Note:** Below mentioned lyrics given in green highlights are as per Ref. 3 above:

ವಿಧಾತೃ ದೇವತೆಗಳು ವಿಷ್ಣುವಿನ ಹಿಂದೆ
ಇದಕೆ ತಪ್ಪಿದರೆ ನಾ ಫಣಿಪನ ಪಿಡಿವೆ ‖ ಪ ‖

ಸಕಲ ತೀರ್ಥಗಳೆಲ್ಲ ಸಾಲಗ್ರಾಮದ ಹಿಂದೆ
ಪ್ರಕಟ ಗ್ರಂಥಗಳು ಭಾಗವತದ ಹಿಂದೆ
ಸಕಲ ವೃಕ್ಷಗಳೆಲ್ಲ ಶ್ರೀತುಲಸಿಯ ಹಿಂದೆ
ಪ್ರಕಟ ಚೈತನ್ಯಗಳು ಲೋಹದ ಹಿಂದೆ ‖ ೧ ‖

ಮತಗಳೆಲ್ಲವು ಮಧ್ವ ಮತ ಸುಸಾರದ ಹಿಂದೆ
ಇತರ ವರ್ಣಗಳೆಲ್ಲ ವಿಪ್ರರಾ ಹಿಂದೆ
ವ್ರತಗಳೆಲ್ಲವು ಹರಿದಿನದ ವ್ರತದ ಹಿಂದೆ
ಅತಿಶಯದ ದಾನಗಳು ಅನ್ನದಾನದ ಹಿಂದೆ ‖ ೨ ‖

ಉತ್ತಮ ಗುಣಗಳೆಲ್ಲ ಉದಾರ ಗುಣದ ಹಿಂದೆ
ಮತ್ತೆ ಕರ್ಮಗಳೆಲ್ಲ ಮಜ್ಜನದ ಹಿಂದೆ
ಕ್ಷಿತಿಯೊಳು ನಮ್ಮ ಪುರಂದರ ವಿಠಲನ್ನ
ಭಕ್ತವತ್ಸಲನೆಂಬ ಬಿರುದು ಮೆರೆವ ಹಿಂದೆ ‖ ೩ ‖

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ತೀರ್ಥಗಳು** – ವಿಷ್ಣು ಪಾದೋದಕ.

**ವಿಧಾತೃ** = ಬ್ರಹ್ಮ ಮುಂತಾದ ದೇವತೆಗಳು

**ವಿದಿತ** – ಜನರಿಗೆ ತಿಳಿದಿರುವ.

**ಹಿಂದೆ** = ಕಡಿಮೆ ತರಗತಿ

**ತಪ್ಪು** = ಸುಳ್ಳಾಗು

**ಫಣಿಫನ** = ಹಾವಿನ ಹೆಡೆ

**ನಾ ಫಣಿಫಣವ ಪಿಡಿವೆ** – ಇದು ಸತ್ಯವೆಂದು ಸಾರಲು ಮಾಡುವ ಶಪಥ; ಹಾವಿನ ಹೆಡೆಯನ್ನು ಕೈಯಲ್ಲಿ ಹಿಡಿದು ಹೇಳುತ್ತೇನೆ ಎಂದು ಪ್ರಮಾಣ ಮಾಡುವುದು.

**ಪ್ರಕಟ** = ಪ್ರಸಿದ್ಧವಾದ

**ಹರಿ ದಿನ** = **ಹರಿವಾಸರ** = ಏಕಾದಶಿ

**ಮಜ್ಜನ** = ಸ್ನಾನ

**ಮಜ್ಜನದ ಹಿಂದೆ –** ಯಾವ ವಿಧಿವಿಹಿತಕರ್ಮ ಮಾಡುವ ಮೊದಲು ಸ್ನಾನಮಾಡಬೇಕೆಂದು ನಿಯಮ.

**ಕರ್ಮ** = ಸಂಧ್ಯಾದಿ ಕರ್ಮಗಳು

**Classification:** Keerthane
**Ankita:** purandara vittala
**Location:** NA
**Category:** Hari Sarvottama
**Sub-Category:** daiva, brahma, deva, kai, tirtha, tulasi, saligrama, vidya, madhva, Krishna, Ekadashi, vrata, anna, karma, snana, japa, gayatri, chitta, Vishnu, bhagavata, mara, dAna, guNa, bhumi,
**Pravachana:** NA
**Explanation:** NA